ಬಿದ್ದವನಂತೆ ಹಂಗೇರಿ, ಸರ್ಬಿಯಾ, ಝೆಕೋಸ್ಲೋವಾಕಿಯಾ, ಮೆಕ್ಸಿಕೊ, ಜಪಾನ್, ಅರೇಬಿಯಾ ಇತ್ಯಾದಿ ಕವಿಗಳನ್ನ ಓದ್ತಿದ್ದೆ. ಈ ಒಂದು ಅನುಸಂಧಾನದ ಫಲವಾಗಿಯೇ 'ಮರುರೂಪಗಳು' ಎಂಬ ಅನುವಾದ ಸಂಕಲನ ಹೊರತಂದೆ. ಇದಾದ ಮೇಲೆಯೂ ದಕ್ಷಿಣ ಅಮೆರಿಕದಿಂದ ಅನೇಕ ಕವಿಗಳನ್ನ ಅನುವಾದಿಸಿದೆ. ನನಗಿಂತ ಭಿನ್ನವಾಗಿ ಬರೆಯುವ ತಮಿಳು, ಹಿಂದಿ, ಇಂಗ್ಲಿಷ್, ಸಂಸ್ಕೃತ ಕವಿಗಳನ್ನು ಕನ್ನಡಕ್ಕೆ ಅನುವಾದಿಸಿದೆ. ಶಂಕರಾಚಾರ್ಯ, ಅಭಿನವಭಟ್ಟ, ಕಾರಿಕಾಲಮ್ಮ, ಅಂಡಾಳ ಇತ್ಯಾದಿ ಜನರ ರಚನೆಗಳನ್ನ ಅನುವಾದ ಮಾಡಿದ್ದೇನೆ. ಬಾಬಾ ನಾಗಾರ್ಜುನರನ್ನು ಕುರಿತು ಸಾಹಿತ್ಯ ಅಕಾಡೆಮಿಯಿಂದ ವಿಶೇಷ ಸಂಚಿಕೆಯೊಂದನ್ನು ತಂದೆ. ಈ ಅನುವಾದದ ಮೂಲಕ ಕಾವ್ಯದ ಬಹುಕುಳತೆಯನ್ನು ಒಳಗೊಳ್ಳುವಲ್ಲಿ, ಅನೇಕತೆಯಲ್ಲಿ ಏಕತೆಯನ್ನು ತರುವಲ್ಲಿ ನನಗೆ ನೆರವಾಯಿತು. ಕಬೀರ್ ಹೇಳುವಂತೆ ಬಾವಿಗಳು ಅನೇಕ ಆದರೆ ಅದರೊಳಗಿನ ನೀರು ಒಂದೇ. ಸಾಂಸ್ಕೃತಿಕವಾದ ಏಕತೆ ಮತ್ತು ಬಹುಕುಳತೆ, ಒಂದುತನ ಮತ್ತು ಅನೇಕತನವನ್ನು ಹಿಡಿಯುವುದು ಕಾವ್ಯದ ಮುಖ್ಯ ಕೆಲಸವಾಗಿ ನನಗೆ ತೋರಿತ್ತು.

◆ ನೀವು ಹೀಗೆ ವಿಭಿನ್ನವಾದ ಕಾವ್ಯ ಪ್ರಯೋಗಗಳನ್ನು ಮಾಡ್ತಾ ಇದ್ದಾಗ ನಿಮ್ಮ ಸಮಕಾಲೀನ ಕವಿಗಳ ಪ್ರತಿಕ್ರಿಯೆ ಹೇಗಿತ್ತು?

ಅಯ್ಯೊ! ತುಂಬಾ ಪ್ರತಿಕೂಲವಾಗಿತ್ತು. ನನ್ನ ಮೊದಲ ಸಂಕಲನ ಬಂದಾಗ ಕಿರಂ ನಾಗಾರಾಜ, ಕೆ.ವಿ. ನಾರಾಯಣ ಅವರನ್ನು ಬಿಟ್ರೆ ಯಾರೂ ಅಂಥ ಉತ್ಸಾಹ ತೋರಿಸಿರಲಿಲ್ಲ. ಅಷ್ಟೇ ಅಲ್ಲ, ನನ್ನನ್ನು ಕವಿ ಅಂತಾನೇ ಒಪ್ಪಿಕೊಳ್ಳಲಿಕ್ಕೆ ತಯ್ಯಾರಿರಲಿಲ್ಲ. ನಾನು ಮಾಡರ್ನ್ ಕವಿ ಅಲ್ಲ ಅಂತ ಅವರ ವಾದ. ಆಮೇಲೆ ಅಡಿಗರು ನನ್ನ 'ಮಿಲರೇಪ' ಕವನವನ್ನು ಮೆಚ್ಚಿ 'ಸಾಕ್ಷಿ'ಯಲ್ಲಿ ಪ್ರಕಟ ಮಾಡಿದ್ರು. ನನ್ನನ್ನು ಕವಿ ಅಂತ ಅಧಿಕೃತವಾಗಿ ಘೋಷಿಸಿದವರು ಅಡಿಗರು. ಅವರು ನನ್ನ ಕಾವ್ಯ ಗುರು. ಅವರ ಮುಂದೆ ನಾನು ಈ ಕವಿತೆಯನ್ನೋದಿದಾಗ ಇನ್ನೂ ಎರಡ್ಮೂರು ಜನ ಕವಿತೆ ಓದಿದ್ರು. ಆಗ ಅಡಿಗರು ಹೇಳಿದ್ರು 'ನೋಡಿ ಈತ ಓದಿದ್ದು ಮಾತ್ರ ಕವಿತೆ. ನಿಮ್ದೆಲ್ಲ ಕವಿತೆ ಅಲ್ಲ ಕಣ್ರಯ್ಯ' ಅಂತ ಹೇಳಿದ್ರು. ತುಮಕೂರಿನಲ್ಲಿ ವೀಚಿ ಅವರಿದ್ರು. ಅವರೂ ಆರಂಭದ ನನ್ನ ದಿಕ್ಕೇಡಿ ದಿನಗಳಲ್ಲಿ ಪ್ರೋತ್ಸಾಹ ಕೊಟ್ರು. ಆಮೇಲೆ ನಾನು ಅಡಿಗರನ್ನ ಭೇಟಿ ಆಗಲಿಕ್ಕೆ ಮೇಲಿಂದ ಮೇಲೆ ಹೋಗ್ತಾ ಇದ್ದೆ. ಅವ್ರು ಹೇಳ್ತಾ ಇದ್ರು. 'ನೋಡಯ್ಯಾ, ಪ್ರತಿಯೊಬ್ಬ ಕವಿ ಕೂಡ ವಿಭಿನ್ನ. ಆತ ಯಾರನ್ನೂ ಅನುಕರಿಸಬಾರದು. ನಿನ್ನ ದಾರಿ ಸರಿ ಇದೆ. ನೀನೂ ಯಾರನ್ನೂ ಅನುಕರಿಸುವ ಅಗತ್ಯ ಇಲ್ಲ. ಮತ್ತು ಕೀಳರಿಮೆ ಪಡಬೇಕಾದ ಅಗತ್ಯವೂ ಇಲ್ಲ'. ನನ್ನ 'ಮಳೆಬಿದ್ದ ನೆಲ'ದಲ್ಲಿ ಕೃತಿಗೆ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಾಗ ನಾನು ನನ್ನ ಸಂಕಲನವನ್ನು ಪ್ರಶಸ್ತಿಗಾಗಿ ಕಳುಹಿಸಿರಲೇ ಇಲ್ಲ. ಇಂಥದ್ದೊಂದು ಪ್ರಶಸ್ತಿ ಇರುತ್ತೆ ಅನ್ನುವುದು ಕೂಡ ಸರಿಯಾಗಿ ಗೊತ್ತಿರಲಿಲ್ಲ. ಈಗ ಹೇಳಿದ್ರೆ ಇದನ್ನ ಯಾರೂ ನಂಬೋದಿಲ್ಲ. ಆದರೆ, ಸತ್ಯ ಇದು. ಇವತ್ತು ಬಹಳಷ್ಟು ಯುವ ಕವಿಗಳು ತಮ್ಮ ಮೊದಲನೇ ಸಂಕಲನಕ್ಕೆ ಆ ಅವಾರ್ಡು ಸಿಕ್ತು, ಈ ಅವಾರ್ಡು ಸಿಕ್ತು ಅಂತ ಹೇಳ್ಕೊಂಡು ತಿರುಗಾಡ್ತಾರೆ. ಸಾಮಾಜಿಕ ಜಾಲತಾಣಗಳಲ್ಲಿ ಅನಗತ್ಯವಾಗಿ ಮೆರೀತಾರೆ. ಕನ್ನಡದಲ್ಲಿ ಬರೆಯೋದಕ್ಕೆ ಮೊದಲೇ ಬೇರೆಬೇರೆ ಭಾಷೆಗಳಿಗೆ ಅನುವಾದ ಮಾಡ್ಕೊಳ್ತಾರೆ. ಸಾಮಾಜಿಕ ಜಾಲತಾಣಗಳಿಂದಾಗಿ ಸ್ಥಳೀಯ ಕವಿಗಳಾಗುವ ಮೊದಲೇ ರಾಷ್ಟ್ರೀಯ ಅಂತರರಾಷ್ಟ್ರೀಯ ಕವಿಗಳಾಗಿಬಿಡ್ತಾರೆ. ಏನಯ್ಯಾ ಇದೆಲ್ಲ! ಮೊದಲು ಸ್ಥಳೀಯತೆಯನ್ನು ಗೆಲ್ಲಬೇಕು. ಆಮೇಲೆ ವಿಶಾಲವೃಕ್ಷದ ಹಾಗೆ ಹರಡಿಕೊಳ್ಳಬೇಕು. ವಿಶಾಲವಾಗಿ ವೃಕ್ಷವೊಂದು ಹರಡಿಕೊಳ್ಳಬೇಕಾದರೆ ಬೇರು ತುಂಬಾ ಗಟ್ಟಿಯಾಗಿರಬೇಕು. ಬೇಂದ್ರೆ ನೋಡಿ, ಅಪ್ಪಟ ಧಾರವಾಡದ ಕವಿ. ಆದರೆ, ಇಡೀ ಜಗತ್ತಿನ ಫಿಲಾಸಫಿಗಳೊಂದಿಗೆ ಮುಖಾಮುಖಿಯಾದ ಕವಿ. ಅವ್ರು ಜಗತ್ತಿನ ಕವಿ